– ಇಲ್ಲ –

ಇ. ಅಕ್ರಮ ಮದ್ಯ ಮಾರಾಟ ಹಾಗೂ ಕಳ್ಳಭಟ್ಟಿ ಹಾವಳಿ ತಡೆಗೆ ಸರಕಾರದ ಕಟ್ಟುನಿಟ್ಟಿನ ಕ್ರಮಗಳೇನು?

ಜಾರಿ ಮತ್ತು ತನಿಖೆ ಕಾರ್ಯವನ್ನು ಚುರುಕುಗೊಳಿಸಿ ಪೊಲೀಸ್ ಸಹಯೋಗದೊಂದಿಗೆ ನಿರಂತರ ದಾಳಿ ಕಾರ್ಯ ನಡೆಸಲಾಗುತ್ತಿದೆ. ಈ ಬಗ್ಗೆ ಅಧೀನ ಸಿಬ್ಬಂದಿಗೆ ಮಾರ್ಗದರ್ಶನ ಕೈಪಿಡಿ ನೀಡಿದ್ದು ಅದರಂತೆ ಕಾರ್ಯ ನಿರ್ವಹಿಸಲಾಗುತ್ತಿದೆ. ಪತ್ರಿಕೆಗಳ ಮೂಲಕ ಹಾಗೂ ಸಮೂಹ ಮಾಧ್ಯಮಗಳ ಮೂಲಕ ಕಳ್ಳಭಟ್ಟಿ/ನಕಲಿ ಮದ್ಯ, ಸಾರಾಯಿ ಸೇವನೆಯಿಮದ ಆಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗಿದೆ. ಸ್ತ್ರೀಶಕ್ತಿ ಸಂಘಗಳು, ಗ್ರಾಮ ಪಂಚಾಯಿತಿ, ಮಂಡಲ್ ಪಂಚಾಯಿತಿ ಸದಸ್ಯರುಗಳು ಹಾಗೂ ಕಂದಾಯ ಅಧಿಕಾರಿಗಳಿಗೆ ಯಾವುದೇ ಅಕ್ರಮ ಚಟುವಟಿಕೆಗಳು ಕಂಡು ಬಂದಲ್ಲಿ ಮಾಹಿತಿ ನೀಡಲು ಕೋರಲಾಗಿದೆ. ಅಧೀನ ಸಿಬ್ಬಂದಿಗೆ ಸದಾ ಜಾಗೃತವಾಗಿದ್ದು ನಿರಂತರ ದಾಳಿ ಕಾರ್ಯಗಳನ್ನು ನಡೆಸಿ ಯಾವುದೇ ಕಾರಣಕ್ಕೂ ಅಕ್ರಮ ಕಳ್ಳಭಟ್ಟಿ ಮಾರಾಟ ನಡೆಯದಂತೆ ಕ್ರಮ ಕೈಗೊಳ್ಳಲಾಗಿದೆ.

ರೂಢಿಗತ ಆರೋಪಿಗಳನ್ನು ಗೂಂಡಾ ಕಾಯಿದೆಯಡಿಯಲ್ಲಿ ಬಂಧಿಸಲು ಅಗತ್ಯ ದಾಖಲಾತಿಗಳನ್ನು ಸಂಗ್ರಹಿಸುತ್ತಿದ್ದು, ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಂಬಂಧಿಸಿದ ಅಬಕಾರಿ ಉಪ ಆಯುಕ್ತರುಗಳಿಗೆ ನಿರ್ದೇಶನ ನೀಡಲಾಗಿದೆ.

190 ಶ್ರೀ ಹ್ಯಾರಿಸ್, ಎನ್.ಎ., ಮಾನ್ಯ ಶಾಸಕರು, ಶಾಂತಿನಗರ ವಿಧಾನ ಸಭೆ, ಬೆಂಗಳೂರು ನಗರ ಜಿಲ್ಲೆ

ಮಾನ್ಯ ಅಬಕಾರಿ ಸಚಿವರು

ಅ ದ್ರಾಕ್ಷಾ ರಸದಿಂದ ತಯಾರಾಗುವ ವೈನ್‌ನ್ನು ಮದ್ಯವಲ್ಲ ಎಂದು ಸರಕಾರ ಪರಗಣಿಸಿದೆಯೇ; ಹೌದಾದಲ್ಲಿ, ಅದಕ್ಕೆ ಸಮರ್ಥನೆ ನೀಡುವ ಅಂಶಗಳು ಯಾವುವು?

ದ್ರಾಕ್ಷಿಯ ರಸದಿಂದ ತಯಾರಾಗುವ ವೈನ್ ರಾಜ್ಯ ಅಬಕಾರಿ ಪರಿಭಾಷೆಯಲ್ಲಿ ಮದ್ಯವಾಗಿರುತ್ತೆ.

ಆ ಸರಕಾರದ ವೈನ್ ನೀತಿಗೆ ರಾಜ್ಯದ ಸಾರ್ವಜನಿಕರು ವಿರೋಧವನ್ನು ವ್ಯಕ್ತಪಡಿಸಿರುವುದು ನಿಜವಲ್ಲವೇ? ಜನಾಭಿಪ್ರಾಯದ ಮೇರೆಗೆ ಸರಕಾರದ ನಿಲುವುಗಳೇನು?

ಹೌದು, ಆದರೆ ಸರ್ಕಾರವು ಎಲ್ಲಾ ಆಕ್ಷೇಪಣೆ ಮತ್ತು ವಿರೋಧಗಳ ಸಾದಕ ಮತ್ತು ಬಾದಕಗಳನ್ನು ಪರಿಶೀಲಿಸಿದ ನಂತರವೇ ಹೊಸ ದ್ರಾಕ್ಷಾರಸ ನಿಯಮಗಳನ್ನು ಅಂತಿಮಗೊಳಿಸಲಾಗಿದೆ.

ಇ ವೈನ್ ಅನ್ನು ಅಬಕಾರಿ ಇಲಾಖಾ ವ್ಯಾಪ್ತಿಯಿಂದ ತೋಟಗಾರಿಕಾ ಇಲಾಖೆಗೆ ವರ್ಗಾಯಿಸುವ ಮೂಲಕ ಅಬಕಾರಿ ಇಲಾಖೆಯ ನೂತನ ನೀತಿಯನ್ನು ಪ್ರತಿಬಿಂಬಿಸುವ ಸರಕಾರದ ಉದ್ದೇಶಗಳೇನು?

ದ್ರಾಕ್ಷಿ ಬೆಳೆಗಾರರ ಹಿತರಕ್ಷಣಾ ದೃಷ್ಟಿಯಿಂದ ದ್ರಾಕ್ಷಿ ಬೆಳೆಗಾರಿಕೆಯನ್ನು ಉತ್ತೇಜಿಸಲು ದ್ರಾಕ್ಷಾ ರಸ ತಯಾರಿಕೆಯನ್ನು ತೋಟಗಾರಿಕೆ ಮತ್ತು ಆಹಾರ ಸಂಸ್ಕರಣ ಕೈಗಾರಿಕೆ ಎಂದು ಪರಿಗಣಿಸಿ, ತೋಟಗಾರಿಕೆ ಇಲಾಖೆಗೆ ವಹಿಸಿದೆ. ಆದರೆ ವೈನ್ ತಯಾರಿಕೆ ಮತ್ತು ಮಾರಾಟ ಅಬಕಾರಿ ಕಾಯ್ದೆಯಡಿಯಲ್ಲಿದ್ದು, ಅಬಕಾರಿ ಇಲಾಖೆಯ ನಿಯಂತ್ರಣದಲ್ಲಿರುತ್ತೆ.

ಈ ರಾಜ್ಯದಲ್ಲಿ ಪ್ರಸ್ತುತ ಉತ್ಪನ್ನವಾಗುತ್ತಿರುವ ವೈನ್ ಪ್ರಮಾಣ ಎಷ್ಟು?

ರಾಜ್ಯದಲ್ಲಿ ಪ್ರಸ್ತುತ ಮಾಸಿಕ ಸರಾಸರಿ 2.0 ಲಕ್ಷ ಬಲ್ಕ್ ಲೀಟರ್ ವೈನ್ ಉತ್ಪತ್ತಿಯಾಗುತ್ತಿದೆ.

192 ಶ್ರೀ.ಸಿದ್ದು ಸವದಿ(ತೆರದಾಳ್)

ಮಾನ್ಯ ಲೋಕೋಪಯೋಗಿ ಸಚಿವರು

ಅ ಕರ್ನಾಟಕ ರಾಜ್ಯ ಅಭಿವೃದ್ಧಿ ಪ್ರಾಧಿಕಾರ (ಕೆಸಿಪ್) ಯೋಜನೆಯಲ್ಲಿ ಇಲ್ಲಿಯವರೆಗೆ ಅಭಿವೃದ್ಧಿಪಡಿಸಿದ ರಸ್ತೆಗಳು ಎಷ್ಟು (ಕಿಲೋಮೀಟರುವಾರು ಮತ್ತು ಆಯಾ ಜಿಲ್ಲಾವಾರು ಮಾಹಿತಿ ಒದಗಿಸುವುದು)

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ–1 ರಲ್ಲಿ 2414 ಕಿ.ಮೀ.ಗಳನ್ನು ಬಹುತೇಕ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಯೋಜನೆಯು ಜುಲೈ 2001 ರಲ್ಲಿ ಪ್ರಾರಂಭಗೊಂಡು ಅಕ್ಟೋಬರ್ 2007 ರಲ್ಲಿ ಪೂರ್ಣಗೊಂಡಿರುತ್ತದೆ. ಪರಿಸರ ಸಂಬಂಧಿತ ಪರವಾನಗಿ ಕಾರಣ ಒಟ್ಟಾರೆ 72 ಕಿ.ಮೀ.ನ ಕೆಲವೊಂದು ರಸ್ತೆ ಭಾಗಗಳ ಕಾಮಗಾರಿ ಅಪೂರ್ಣಗೊಂಡಿದ್ದು, ಸದರಿ ಕಾಮಗಾರಿಗಳು ಮುಂದುವರೆದಿರುತ್ತದೆ. ರಸ್ತೆಗಳ ವಿವರವನ್ನು ಅನುಬಂಧ–1 ಮತ್ತು ಜಿಲ್ಲಾವಾರು ವಿವರವನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಆ ಈ ಯೋಜನೆಯಲ್ಲಿ ಅಭಿವೃದ್ಧಿಪಡಿಸಬೇಕೆಂದಿರುವ ರಸ್ತೆಗಳು ಯಾವುವು ಮತ್ತು ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;